ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ ಕೆಆರ್ ಎನ್ ಎಸ್ - 19

3ನೇ ವರ್ಷ 24ನೇ ಸಂಚಿಕೆ ಕೊಪ್ಪ 17-2-1985 ಭಾನುವಾರ ಬೆಲೆ 40 ಪೈಸೆ

ಶೃಂಗೇರಿಯಲ್ಲಿ 22 ದಿನ ವಿಜೃಂಭಣೆಯಿಂದ ನಡೆದ

ಕುಂಭಾಭಿಷೇಕ ಮಹೋತ್ಸವ ಮುಕ್ತಾಯ

ಶೃಂಗೇರಿ: ಇಲ್ಲಿನ ಬೆಟ್ಟದ ಮಲಹಾನಿಕರೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ನಿಮಿತ್ತ 22 ದಿನಗಳ ಕಾಲ ನಡೆದ ಕುಂಭಾಭಿಷೇಕ ಇತ್ಯಾದಿ ಕಾರ್ಯಕ್ರಮಗಳು ಫೆ. 12 ರಂದು ನಡೆದ ಸಹಸ್ರ ಚಂಡಿ ಯಾಗದೊಂದಿಗೆ ಮುಕ್ತಾಯವಾದವು.

ಫೆ. 11 ರಂದು ನಡೆದ ಕುಂಭಾಭಿಷೇಕಕ್ಕೆ ಮೊದಲು ಶ್ರೀಮಠದಿಂದ ಬೆಟ್ಟದವರೆಗೆ ಇಬ್ಬರು ಜಗದ್ಗುರುಗಳೂ ವೈಭವದ ಮೆರವಣಿಗೆಯಲ್ಲಿ ತೆರಳಿ ಬೆಟ್ಟ ಏರಿದರು. ವಿವಿಧ ಪೂಜೆ, ಅಭಿಷೇಕಗಳ ನಂತರ ಈಶ್ವರಲಿಂಗ ಮತ್ತು ಭವಾನಿ ಅಮ್ಮನವರ ಮೂರ್ತಿಗಳಿಗೆ ಅಭಿಷೇಕ, ಮಹಾಪೂಜೆ, ಮಂಗಳಾರತಿಗಳನ್ನು ನೆರವೇರಿಸಲಾಯಿತು.

ಈ ಎರಡೂ ದಿನಗಳ ಕಾರ್ಯಕ್ರಮಗಳಲ್ಲೂ ಹರಿಹರಪುರ ಮಠಾಧೀಶರು, ದ್ವಾರಕೆಯ ಜಗದ್ಗುರುಗಳು ಮತ್ತು ಶಿವಗಂಗಾ ಮಠಾಧೀಶರು ಭಾಗವಹಿಸಿದ್ದಲ್ಲದೆ, ಗೋವಾದ ಮಾಜಿ ಮುಖ್ಯಮಂತ್ರಿ ಶಶಿಕಲಾ ಕಾಕೋಡ್ಕರ್, ಮಹಾರಾಷ್ಟ್ರದ ಆರೋಗ್ಯ ಮಂತ್ರಿ ಲಲಿತಾ ರಾವ್ ಅವರುಗಳೂ ಸೇರಿದಂತೆ ಸಾವಿರಗಟ್ಟಲೆ ಜನ ಉತ್ಸವಗಳಲ್ಲಿ ಪಾಲ್ಗೊಂಡರು.

22 ದಿನಗಳಿಂದಲೂ ದಿನಂಪ್ರತಿ ಸಾವಿರಾರು ಜನ ಎರಡು ಹೊತ್ತು ಸಹ ಭೋಜನ ಪಡೆದರು. ಇಡೀ ತಾಲ್ಲೂಕಿನ ಜನರಲ್ಲದೆ ನೆರೆಯ ತಾ|| ಗಳಿಂದಲೂ ಬಹಳ ಜನ ಈ ಕಾರ್ಯಕ್ರಮಗಳಲ್ಲಿ ವಿವಿಧ ರೀತಿಯಲ್ಲಿ ಸ್ವಯಂ ಸೇವಕರಾಗಿ ದುಡಿದು, ಕಾರ್ಯಕ್ರಮ ಅದ್ದೂರಿಯಾಗಿ ಯಶಸ್ವಿಯಾಗಲು ನೆರವಾದರು.

ಜಿಲ್ಲೆಯ ಆರು ಕ್ಷೇತ್ರಗಳಲ್ಲಿ ಒಟ್ಟು

29 ಸ್ಪರ್ಧಿಗಳು; 4 ಕಡೆ ತ್ರಿಕೋಣ ಸ್ಪರ್ಧೆ

ಚಿಕ್ಕಮಗಳೂರು: ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 29 ಜನ ಉಮೇದುವಾರರು ಸ್ಪರ್ಧಾ ಕಣದಲ್ಲಿದ್ದಾರೆ. ಇದರಲ್ಲಿ 14 ಜನ ರಾಜಕೀಯ ಪಕ್ಷಗಳಿಗೆ ಸೇರಿದವರು, 15 ಜನ ಪಕ್ಷೇತರರು.

ಶೃಂಗೇರಿ ಕ್ಷೇತ್ರದಲ್ಲಿ ಜನತಾದ ಹೆಚ್. ಜಿ. ಗೋವಿಂದ ಗೌಡ, ಕಾಂಗ್ರೆಯಿಂದ ಯು.ಕೆ.ಶಾಮಣ್ಣ, ಭಾಜಪಾದಿಂದ ಎ.ಎಂ ಶ್ರೀಕಂಠೇಗೌಡ ಅಲ್ಲದೆ, 'ನಾವು ಕನ್ನಡಿಗರು' ಸಂಘಟನೆಯ ಎಂ. ಕೆ. ದಯಾನಂದ, ಹಾಗೂ ಎಸ್.ಬಿ.ಪ್ರಭಾಕರ್ ಮತ್ತು ಮಂಜುನಾಥಾಚಾರ್ ಇವರುಗಳಿದ್ದಾರೆ.

ಆರೂ ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳಿಂದ ನಾಮಪತ್ರ ಹಾಕಿಸಿದ್ದ ಸಿಪಿಐ ಎಲ್ಲ ಕಡೆ ವಾಪಸ್ ತೆಗೆಸಿದೆ. ರಾಜ್ಯ ರೈತ ಸಂಘವೂ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿಲ್ಲ.

ಬಂಡಾಯ

ಚಿಕ್ಕಮಗಳೂರು ಕ್ಷೇತ್ರದಲ್ಲಿ ಜನತಾದಿಂದ ಸ್ಪರ್ಧಿಸಲು ಪ್ರಬಲ ಪ್ರಯತ್ನ ನಡೆಸಿದ ಐ.ಬಿ.ಶಂಕರ್ ನಾರಾಯಣಗೌಡರಿಗೆ ಟಿಕೆಟ್ ಸಿಕ್ಕದ್ದರಿಂದ ಪಕ್ಷ ತ್ಯಜಿಸಿ, ಸ್ವತಂತ್ರವಾಗಿ ಸ್ಪರ್ಧಿಸಿದ್ದಾರೆ. ಇಲ್ಲಿ ಕಾಂಗ್ರೆ ಅಭ್ಯರ್ಥಿ ಸಗೀರ್ ಅಹಮದ್. ಇದಲ್ಲದೆ ಮೂವರು ಪಕ್ಷೇತರರಿದ್ದಾರೆ.

ಮೂಡಿಗೆರೆಯಿಂದ ಒಮ್ಮೆ ಗೆದ್ದು ಒಮ್ಮೆ ಸೋತ ಮೋಟಮ್ಮ ಕಾಂಗ್ರೆ ಅಭ್ಯರ್ಥಿ. ಸರ್ಕಾರಿ ನೌಕರರಾಗಿದ್ದು ರಾಜೀನಾಮೆ ನೀಡಿರುವ ಬಿ.ಬಿ. ನಿಂಗಯ್ಯ ಜನತಾ ಪಕ್ಷದಿಂದ ಪಿ. ತಿಪ್ಪಯ್ಯ ಅವರ ಬದಲಿಗೆ ಟಿಕೆಟ್ ಪಡೆದಿದ್ದಾರೆ. ಬಿಜೆಪಿ, ಕಡೂರಿನ ಪುರಸಭಾಧ್ಯಕ್ಷ ಹಾಗೂ ಕಾಂಗ್ರೆ ಜಿಲ್ಲಾ ಹಿಂದುಳಿದ ವರ್ಗದವರ ಸೆಲ್ ಸಂಚಾಲಕರಾಗಿದ್ದ ಸಿ. ನಂಜಪ್ಪ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡು ಅಭ್ಯರ್ಥಿಯಾಗಿ ನಿಲ್ಲಿಸಿದೆ.

ಕಡೂರು, ಬೀರೂರು, ತರೀಕೆರೆಗಳಲ್ಲಿ ಕಾಂಗ್ರೆ ಮತ್ತು ಜನತಾ ಅಭ್ಯರ್ಥಿಗಳಲ್ಲದೆ ಎಂಟು ಜನ ಪಕ್ಷೇತರರಿದ್ದಾರೆ. ಬಿಜೆಪಿ ಮೂಡಿಗೆರೆ ಮತ್ತು ಶೃಂಗೇರಿ ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧೆಗಿಳಿದಿದೆ. ಈ ಎರಡೂ ಕ್ಷೇತ್ರಗಳಲ್ಲಿ ಮತ್ತು ಜನತಾ ಬಂಡಾಯಿಗರು ಸ್ಪರ್ಧಿಸಿರುವ ಚಿಕ್ಕಮಗಳೂರು, ಕಡೂರು ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ ಉಂಟಾಗಿದೆ.

ನಾರ್ವೆಯಲ್ಲಿ ಜಾನುವಾರು ಆರೋಗ್ಯ ತಪಾಸಣೆ, ಚಿಕಿತ್ಸೆ ಮತ್ತು ಪ್ರದರ್ಶನ

ನಾರ್ವೆ: ಕೊಪ್ಪದ ರೋಟರಿ ಕ್ಲಬ್, ಸಿಂಡಿಕೇಟ್ ಬ್ಯಾಂಕ್ ಮತ್ತು ಕೃಷಿ ವಿಚಾರ ವಿನಿಮಯ ಕೇಂದ್ರಗಳ ಆಶ್ರಯದಲ್ಲಿ ಜಾನುವಾರುಗಳ ಆರೋಗ್ಯ ತಪಾಸಣೆ, ಚಿಕಿತ್ಸೆ ಮತ್ತು ಪ್ರದರ್ಶನ ಹಾಗೂ ಬೆಳಗೊಳ ಕೃಷಿ ವಿಚಾರ ವಿನಿಮಯ ಕೇಂದ್ರದ ಉದ್ಘಾಟನೆಯ ಕಾರ್ಯಕ್ರಮಗಳು ನಡೆದವು.

ಈ ಕಾರ್ಯಕ್ರಮದಲ್ಲಿ ತಿಪಟೂರಿನ 'ಬ್ಯಾಫ್' ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ವೈಜ್ಞಾನಿಕ ಅಧಿಕಾರಿ ಡಾ|| ಎ. ಚಂದ್ರಶೇಖರಪ್ಪ, ಜಿಲ್ಲಾ ಪಶುವೈದ್ಯ ಹಿರಿಯ ಸಹಾಯಕ ನಿರ್ದೇಶಕ ಡಾ|| ಪಾರ್ಶ್ವನಾಥಯ್ಯ, ಕೊಪ್ಪ ಪಶುವೈದ್ಯ ಆಸ್ಪತ್ರೆಯ ಸಹಾಯಕ ನಿರ್ದೇಶಕ ಡಾ|| ಶ್ರೀನಿವಾಸಮೂರ್ತಿ ಮತ್ತು ಹರಿಹರಪುರ ಪಶುವೈದ್ಯ ಡಾ|| ಶಿವಲಿಂಗಮೂರ್ತಿ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ, ಕೊಪ್ಪದ ಸಿಂಡಿಕೇಟ್ ಬ್ಯಾಂಕಿನವರು 'ದ್ವಾಕ್ರಾ', ಐ.ಆರ್.ಡಿ.ಪಿ. ಮತ್ತು 'ನೇಗಿಲು ಭಾಗ್ಯ' ಯೋಜನೆಗಳಡಿ ನೀಡಿದ್ದ ವಿವಿಧ ಉದ್ದೇಶಗಳ ಸಾಲ ಪತ್ರಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ. ಬಾಲಪ್ಪ ವಿತರಣೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಾರ್ವೆ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ.ಎಸ್ ಕಾಡಪ್ಪಗೌಡ, ಸಾಲಗಳನ್ನು ಸದುಪಯೋಗಪಡಿಸಿಕೊಂಡು ಸಕಾಲದಲ್ಲಿ ಮರು ಪಾವ್ತಿ ಮಾಡಿ ಬೇರೆಯವರಿಗೂ ಈ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಲು ಅವಕಾಶ ಕೊಡುವಂತೆ ಪ್ರಯೋಜನದಾರರಿಗೆ ಕರೆ ಕೊಟ್ಟರು.

(4 ನೇ ಪುಟಕ್ಕೆ)

ಕೊರ್ಡಿಹಿತ್ಲು ಆಸ್ಪತ್ರೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ತಪಾಸಣೆ ಶಿಬಿರ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಮತ್ತು ಕೊರ್ಡಿಹಿತ್ಲಿನ ದಿ|| ಎ.ಎಲ್.ಎನ್. ರಾವ್ ಸ್ಮಾರಕ ಆಸ್ಪತ್ರೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಫೆ. 24 ರ ಭಾನುವಾರ ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಯ ಸ್ತ್ರೀ ರೋಗ ತಜ್ಞರು ಮತ್ತು ಮಕ್ಕಳ ಶಸ್ತ್ರ ಚಿಕಿತ್ಸಾ ತಜ್ಞರಿಂದ ಉಚಿತ ಪರೀಕ್ಷೆ ಮತ್ತು ಸಲಹೆಯ ಶಿಬಿರ ಏರ್ಪಡಿಸಲಾಗಿದೆ.

ಮೇಗೂರಲ್ಲಿ ಯಶಸ್ವಿ ಯುವಜನ ಮೇಳ

ಮೇಗೂರು: ಕೊಪ್ಪ ತಾ|| ಮಟ್ಟದ 1984-85ನೇ ಸಾಲಿನ ಯುವಜನ ಮೇಳ ಇಲ್ಲಿ ಫೆ. 10 ಮತ್ತು 11 ರಂದು ನಡೆಯಿತು. ತಹಸೀಲ್ದಾರ್ ಎಸ್. ಕರೀಗೌಡ ಅವರ ಅಧ್ಯಕ್ಷತೆಯಲ್ಲಿ ವಿಭಾಗ ಅರಣ್ಯಾಧಿಕಾರಿ ವಿನಯ್ ಲೂಥ್ರ ಮೇಳವನ್ನು ಉದ್ಘಾಟಿಸಿದರು. ಕೊಪ್ಪ ವೈದ್ಯಾಧಿಕಾರಿ ಡಾ|| ಎ. ಜಗದೀಶ್, ಟಿ.ಕೆ.ಶ್ರೀನಿವಾಸ್, ಮೇಗೂರು ಧರ್ಮದರ್ಶಿ ಮಂಡಳಿ ಅಧ್ಯಕ್ಷ ರಘುಪತಿ ಮುಖ್ಯ ಅತಿಥಿಗಳಾಗಿದ್ದರು.

ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ. ಬಾಲಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ, ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ತಲವಾನೆ ಮಂಜಪ್ಪಯ್ಯ ಬಹುಮಾನ ವಿತರಣೆ ಮಾಡಿದರು. ಸ|| ಅರಣ್ಯ ಸಂರಕ್ಷಣಾಧಿಕಾರಿ ದೇವರಾಜ್, ಜಿಲ್ಲಾ ಯುವಜನ ಸೇವಾಧಿಕಾರಿ ಎಂ. ಕಣ್ಣನ್, ಗಾಯಕ–ಕೀರ್ತನಕಾರ ಜಾಲುಮನೆ ಸುಬ್ಬರಾಯ ಮುಖ್ಯ ಅತಿಥಿಗಳಾಗಿದ್ದರು.

ನೃತ್ಯ, ನಾಟಕ, ಯಕ್ಷಗಾನ, ಕೋಲಾಟ ಮುಂತಾದ ಹಲವು ವೈವಿಧ್ಯಮಯವಾದ, ಸ್ಪರ್ಧಾತ್ಮಕ ಮನರಂಜನಾ ಕಾರ್ಯಕ್ರಮಗಳು ಸ್ಥಳೀಯ ಮತ್ತು ಸುತ್ತಮುತ್ತಲ ಹಳ್ಳಿಗರಿಗೆ ಅಪೂರ್ವವಾದ ರಸಮಂಜರಿ ಒದಗಿಸಿದವು.

ಪ್ರತಿ ವರ್ಷ ಸುಮಾರು 25 ಯುವಕ ಸಂಘ, ಯುವತಿ ಮಂಡಲಿಗಳು ಭಾಗವಹಿಸುತ್ತಿದ್ದು ಈ ಬಾರಿ ಮೇಗೂರಿನ 2 ತಂಡಗಳೂ ಸೇರಿ 19 ತಂಡಗಳು ಮಾತ್ರ ಭಾಗವಹಿಸಿದ್ದವು.

ಅ. ಭಾ. ಗ್ರಾಮೀಣ ಪತ್ರಕರ್ತರ ಸಮಾವೇಶ

ಚಿಕ್ಕಮಗಳೂರು: ಅಖಿಲ ಭಾರತ ಗ್ರಾಮಾಂತರ ಪತ್ರಕರ್ತರ ಮೊಟ್ಟ ಮೊದಲ ಸಮಾವೇಶವೊಂದು ಫೆ. 23 ಮತ್ತು 24 ರಂದು ಮಂಡ್ಯದಲ್ಲಿ ನಡೆಯಲಿದೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಮಂಡ್ಯ ಜಿಲ್ಲಾ ಘಟಕ ನಡೆಸುವ ಈ ಸಮಾವೇಶದಲ್ಲಿ ದೇಶದ ಎಲ್ಲೆಡೆಯಿಂದ ಸುಮಾರು 300 ಪತ್ರಕರ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಕೈಗಾರಿಕಾಭಿವೃದ್ಧಿ ವಿಚಾರ ಸಂಕಿರಣ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರ ಇವುಗಳ ಸಂಯುಕ್ತ ಆಶ್ರಯದಲ್ಲಿ ಫೆ. 20 ರಂದು ಬೆಳಿಗ್ಗೆ ತಾ|| ಮಟ್ಟದ "ಗ್ರಾಮೀಣ ಕೈಗಾರಿಕಾಭಿವೃದ್ಧಿ ವಿಚಾರ ಸಂಕಿರಣ" ನಡೆಯುತ್ತದೆ.

ಲಯನ್ಸ್‌ಕ್ಲಬ್ ಅಧ್ಯಕ್ಷ ಡಾ|| ಮೋಹನ್ ... ಅಧ್ಯಕ್ಷತೆ ವಹಿಸಲಿದ್ದು, ಪಿ. ಜಿ. ಗುರ್ಜರ್ ಮುಖ್ಯ ಅತಿಥಿಗಳಾಗಿರುತ್ತಾರೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಹಿರಿಯ ಅಧಿಕಾರಿಗಳೂ ಭಾಗವಹಿಸುತ್ತಾರೆ.

ಈ ಸಮಾರಂಭದಲ್ಲಿ ಕುಶಲಕರ್ಮಿಗಳಿಗೆ ಸೌಲಭ್ಯಗಳ ವಿತರಣೆಯೂ ನಡೆಯಲಿದೆ.

'ಮಾಮ್ ಕೋಸ್' ಉಪಾಧ್ಯಕ್ಷರಾಗಿ ಆನಂದರಾಂ ಭಟ್

ಕೊಪ್ಪ: ಶಿವಮೊಗ್ಗದ ಜಿಲ್ಲಾಧಿಕಾರಿಗಳು ಪದನಿಮಿತ್ತ ಅಧ್ಯಕ್ಷರಾಗಿರುವ 'ಮಾಮ್‌ಕೋಸ್'ನ ಉಪಾಧ್ಯಕ್ಷರಾಗಿ ಕೊಪ್ಪ ತಾ|| ನವರಾದ ಎಚ್.ಎ.ಆನಂದರಾಂ ಭಟ್ಟರು ಆಯ್ಕೆಯಾಗಿದ್ದಾರೆ. ಕಾರ್ಯನಿರ್ವಾಹಕ ಸಮಿತಿ ಸದಸ್ಯರಾಗಿ ಕೆ. ಎಸ್. ಶಾಂತಾರಾಂ (ಕೊಪ್ಪ ಕ್ಷೇತ್ರ), ಡಾ|| ಬಿ.ಎಲ್. ರಂಗಪ್ಪ (ತೀರ್ಥಹಳ್ಳಿ) ಮತ್ತು ಹೆಚ್.ಎಸ್. ಮಂಜಪ್ಪ (ಸಾಗರ) ಆಯ್ಕೆಯಾಗಿದ್ದು ಜಿಲ್ಲಾ ಬ್ಯಾಂಕ್‌ನ ನಾಮಕರಣ ಸದಸ್ಯರಾಗಿ ಪಿ. ಎಸ್. ರಾಮಪ್ಪ ನೇಮಕವಾಗಿದ್ದಾರೆ.

ದುರಾಸೆ, ಕ್ರೌರ್ಯಕ್ಕೆ ಮುಗ್ಧ ಆನೆಗಳ ಬಲಿ

ಬಾಳೆಹೊನ್ನೂರು, ಸಂಗಮೇಶ್ವರ ಪೇಟೆ, ಮುತ್ತೋಡಿಗಳ ಸುತ್ತ ಮುತ್ತ ಈಚೆಗೆ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ಈ ವರ್ಷವಂತೂ ಅವು ತೆಗೆದುಕೊಂಡ ಅಮೂಲ್ಯ ಜೀವಗಳ ಬಲಿ ಅರ್ಧ ಡಜನ್ನಾಗಿದೆ; ಅವು ನಾಶ ಮಾಡಿದ ಫಸಲು, ಆಸ್ತಿ-ಪಾಸ್ತಿಗೆ ಲೆಕ್ಕವಿಲ್ಲ, ಪರಿಹಾರವಂತೂ ಕನಸಿನ ಗಂಟು.

ಇಂಥ ಪರಿಸ್ಥಿತಿಗೆ ಏನು ಕಾರಣ? ಆನೆಗಳ ಸಂತತಿ ಮಿತಿ ಮೀರಿತೆ? ಆನೆಗಳಿಗೂ ನಾಯಿಗಳಿಗೆ ಹಿಡಿದಂತೆ ಹುಚ್ಚು ಹಿಡಿಯತೊಡಗಿತೆ? ಏನಾಯಿತು?

ಇಲ್ಲಿ ಈಚಿನ ಒಂದೆರಡು ಪ್ರಕರಣಗಳನ್ನು ನೆನೆದರೆ ಕಾರಣ ಸ್ವಲ್ಪಮಟ್ಟಿಗೆ ಅರ್ಥವಾಗಬಹುದು.

ಅರೆಹೊಟ್ಟೆ, ಅತಿದುಡಿತ

ಜನವರಿ 25 ರಂದು ಮುತ್ತೋಡಿ ಅಭಯಾರಣ್ಯದ ಪ್ರವಾಸಿ ಮಂದಿರದ ಬಳಿ ರೊಚ್ಚಿಗೆದ್ದ ಸಾಕಿದ ಆನೆಯೊಂದನ್ನು ಹೊಡೆದುರುಳಿಸಲಾಯಿತು. ಅದಕ್ಕೆ 2-3 ದಿನಗಳಿಂದ ಆ ಆನೆ ಆ ಸರಹದ್ದಿನಲ್ಲಿ ವಾಹನಗಳ ಮೇಲೆ ಎಸ್ಟೇಟ್ ಮನೆಗಳ ಮೇಲೆ ಕಂಡ ಕಂಡವರ ಮೇಲೆಲ್ಲಾ ತನ್ನ ಕೋಪ ಹರಿಯಬಿಟ್ಟಿತ್ತು, ಒಬ್ಬ ರೇಂಜರನ್ನು ಕೊಂದಿತ್ತು.

"ಹುಚ್ಚು ಹಿಡಿದ", "ಮದವೇರಿದ" ಮುಂತಾದ ಹಲವು ಬಗೆಯಿಂದ ಆ ಆನೆಯ ಬಗ್ಗೆ ಬರೆಯಲಾಗಿತ್ತು. ಅದನ್ನು ಕೊಂದ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ಮತ್ತು ಅವರ ಪಡೆಯ 'ಸಾಹಸ'ವನ್ನೂ ವರ್ಣಿಸಲಾಯಿತು.

ಆದರೆ ಆ ಆನೆ ಹಸಿದಿತ್ತು, ಅರೆ ಹೊಟ್ಟೆಯಲ್ಲಿ ಯದ್ವಾ ತದ್ವಾ ದುಡಿದು ದಣಿದಿತ್ತು ಎಂಬ ಸತ್ಯ ಹೆಚ್ಚು ಬೆಳಕಿಗೆ ಬಾರದೆ ಹೋಯಿತು.

ಕೋಪ ಬಂದುದೇಕೆ?

ನಿಜವಾಗಿ ಆ ಆನೆ 'ಮಾಧವ' ಬಹಳ ಮುಗ್ಧ, ಸಾಧು, ವಿಧೇಯ. 48 ವರ್ಷ ವಯಸ್ಸಿನ ಅದನ್ನು ಅರಣ್ಯದಿಂದ ರಸ್ತೆಗೆ ಮರದ ದಿಮ್ಮಿಗಳನ್ನು ಸಾಗಿಸಲೆಂದು ಟಿಂಬರ್ ಕಂಟ್ರಾಕ್ಟರೊಬ್ಬರು ಕೇರಳದಿಂದ ತರಿಸಿದ್ದರು. ಮಾವುತನ ಮಾತನ್ನು ವಿಧೇಯವಾಗಿ ಪಾಲಿಸುತ್ತಿದ್ದ ಅದು ದಿನಕ್ಕೆ 15 ಟನ್‌ಗಳಷ್ಟು ದಿಮ್ಮಿಗಳನ್ನು ಹೇಳಿದೆಡೆಗೆ ಸಾಗಿಸುತ್ತಿತ್ತು.

ಆದರೆ ಅದರ ಮಾವುತರು ಅದರ ಆಹಾರದಲ್ಲಿ ಕೊರೆ ಮಾಡಿ ಜೇಬಿಗೆ ಇಳಿಸಿದ್ದಲ್ಲದೆ ಅದರ ಕೈಯಲ್ಲಿ 20 ಟನ್‌ವರೆಗೂ ಭಾರ ಎಳೆಸಲಾರಂಭಿಸಿದರು. ಹೀಗೆ ಅರೆಹೊಟ್ಟೆಯಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚು ದುಡಿದ ಆನೆ ಅನ್ನ ಕೇಳಿತು. ಮಾವುತ ಕೊಡಲಿಲ್ಲ. ಅದು ರೊಚ್ಚಿಗೆದ್ದಿತು. ಪ್ರತಿಯಾಗಿ ಮಾವುತ ಅದರ ಕಾಲಿನ ಉಗುರನ್ನು ಕಲ್ಲಿನಿಂದ ಜಜ್ಜಿದ. ಮಾನಸಿಕವಾಗಿಯೂ ದೈಹಿಕವಾಗಿಯೂ ಘಾಸಿಗೊಂಡ ಆನೆ ಸಿಟ್ಟಾಗಿ ಮಾವುತನನ್ನು ಅಟ್ಟಿಕೊಂಡು ಹೋಯಿತು.

ಮಾವುತ ಓಡಿ ಮರವೇರಿ ಕೂತ. ಆನೆ ಅವನನ್ನು ಹುಡುಕುತ್ತಾ ಕಾಡೆಲ್ಲ ಸುತ್ತಿತು. ಇಡೆಗೆ ಸಿಕ್ಕಿ ಸಿಕ್ಕಿದ್ದರ ಮೇಲೆಲ್ಲ ತನ್ನ ಕೋಪ ತೀರಿಸಿಕೊಳ್ಳತೊಡಗಿತು. ಹಲವಾರು ಲಾರಿ, ಜೀಪು ಮತ್ತಿತರ ವಾಹನಗಳು ಪುಡಿಯಾದವು, ನುಜ್ಜಾದವು.

ರೇಂಜರ್ ಬಲಿ

ಆ ಪ್ರದೇಶದ ಜನ ಆನೆಯ ಹಾವಳಿಯಿಂದ ಭೀತರಾಗಿ ಅಧಿಕಾರಿಗಳ ಮೊರೆ ಹೊಕ್ಕರು. ಮುತ್ತೋಡಿ ಅಭಯಾರಣ್ಯದ ರೇಂಜರ್ ಹನುಮಂತಪ್ಪ ಲಾರಿಯಲ್ಲಿ ಕೂತು ಆನೆಯನ್ನು ಹುಡುಕುತ್ತಾ ಹೊರಟರು.

ಬೆಳಗಿನ ಜಾವದ ಹೊತ್ತಿಗೆ ಆನೆ ಸಿಕ್ಕಿತು —ಅಥವಾ ಆನೆಯ ಕೈಗೆ ಅವರು ಸಿಕ್ಕಿದರು! ಅವರನ್ನು ಅಪ್ಪಳಿಸಿ ತುಳಿದು ಸಾಯಿಸಿಬಿಟ್ಟಿತು. ಲಾರಿಯನ್ನು ಬಿದಿರು ಹಿಂಡಲೊಳಗೆ ಹೊತಿಟ್ಟಿತು. ಒಬ್ಬ ನಿಷ್ಠಾವಂತ, ಸ್ನೇಹಶೀಲ ಅಧಿಕಾರಿ ಹೀಗೆ ತಮ್ಮ ಕಿರಿ ವಯಸ್ಸಿನ ಪತ್ನಿ ಮತ್ತು ಚಿಕ್ಕ ಮಕ್ಕಳನ್ನು ಅಗಲಿ ಹೋದರು. ಇನ್ನೊಬ್ಬ ರೇಂಜರರ ಕಾಲು ಮುರಿಯಿತಾದರೂ ಆಶ್ಚರ್ಯಕರ ರೀತಿಯಲ್ಲಿ ಪ್ರಾಣಾಪಾಯದಿಂದ ಪಾರಾದರು.

ಪೋಲೀಸಧಿಕಾರಿಯ 'ಸಾಹಸ'

ಇಷ್ಟಾದ ಕೂಡಲೇ ಚಿಕ್ಕಮಗಳೂರು ವಿಭಾಗ ಅರಣ್ಯ ಸಂರಕ್ಷಣಾಧಿಕಾರಿ, ವನ್ಯ ಪ್ರಾಣಿಗಳ ಬಗ್ಗೆ ಅಪಾರ ಕಳಕಳಿ ಇರುವ ಚಂದ್ರಶೇಖರ ಮೂರ್ತಿ. ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ಎಸ್.ಎಸ್. ಪಾವಟೆ ಮುತ್ತೋಡಿ ಪ್ರವಾಸಿಮಂದಿರಕ್ಕೆ ಬಂದರು. ಅಧಿಕಾರಿಯೊಡನೆ ಸಶಸ್ತ್ರ ಪೋಲೀಸ್ ಪಡೆಯಿತ್ತು. ಅಷ್ಟರೊಳಗೆ ಕೇರಳದಿಂದ ಪಶುವೈದ್ಯ ಡಾ|| ಪಣೀಕ್ಕರ್ ಅವರೂ ಬಂದಿದ್ದರು. ಆನೆ ಪ್ರವಾಸಿ ಮಂದಿರದೆದುರು ಕಾಲಿನ ಸರಪಳಿ ಮರಕ್ಕೆ ಸಿಕ್ಕಿ ಹಾಕಿಕೊಂಡು ಕದಲಲಾರದೆ ನಿಂತಿತ್ತು.

ಆನೆಗೆ ಮದವಿಳಿಸುವ ಚುಚ್ಚು ಮದ್ದನ್ನು ನೀಡಿ ತಹಬಂದಿಗೆ ತರುವ ತೀರ್ಮಾನವಾಯಿತು. ಚುಚ್ಚುಮದ್ದು ನೀಡಿ 15-20 ನಿಮಿಷದೊಳಗೆ ಅದು ಮತ್ತು ಬಂದು ಮಲಗುವುದೆಂದು ವೈದ್ಯರು ಹೇಳಿದ್ದರು.

ಆದರೆ ಚುಚ್ಚುಮದ್ದನ್ನು ಕೋವಿಯಿಂದ ಹಾರಿಸಿದ್ದೇ ತಡ ಬಾಕಿ-ಮತ್ತು-ಕೋವಿಯ ರಕ್ತದಾಹ ಏಕ್‌ದಂ ಆಸ್ಫೋಟಿಸಿದಂತೆ, ಪೋಲೀಸರ ಕೋವಿಗಳೂ ಮೊಳಗಿದವು ಮಾಧವನ ಮೇಲೆ ಗುಂಡಿನ ಮಳೆ ಗರೆಯಿತು. ಈ ದುರಂತ ಕಾರ್ಯ ನೋಡಿ ಡಾ|| ಪಣಿಕ್ಕರ್ ಕಣ್ಣೀರಿಟ್ಟರು. ಚಂದ್ರಶೇಖರ ಮೂರ್ತಿ ನೋಡಲಾರದೆ ದೂರ ಹೋಗಿ ನಿಂತರು.

§ § §

ಕಾಡಾನೆಗಳು ಬಾಳೆಹೊನ್ನೂರಿನ ಪೇಟೆಯವರೆಗೂ ಬರಲು ತೊಡಗಿವೆಯೆಂದು ಸುದ್ದಿ. ಅದೂ ಸಂಜೆಯಾಗುವುದರೊಳಗೇ. ಅವು ತೋಟ-ಗದ್ದೆಗಳಿಗೆ ಬಂದಾಗ ಜನ ಅವುಗಳ ಹತ್ತಿರವೇ ಹೋಗಿ ಎಮ್ಮೆಗಳನ್ನು ಅಟ್ಟುವಂತೆ ಹೊಡೆದು ಅಟ್ಟುತ್ತಾರೆ. ರಾತ್ರಿ ವೇಳೆ 10–12 ಸೆಲ್ಲುಗಳ 'ಡಬ್ಬಿ-ಟಾರ್ಚ್' ಮಾಡಿಕೊಂಡು ಅವುಗಳ ಕಣ್ಣಿನ ಹತ್ತಿರದಿಂದ ಅದರ ಪ್ರಖರವಾದ ಬೆಳಕನ್ನು ಬಿಟ್ಟು ಓಡಿಸಲು ಯತ್ನಿಸುತ್ತಾರೆ. ಅಥವಾ ಜಂಬೆ ಸೌದೆಯ ಬೆಂಕಿ ಕೊಳ್ಳಿ ಉಪಯೋಗಿಸುತ್ತಾರೆ. ಅದನ್ನು ಒಮ್ಮೆ ಕುಕ್ಕಿದರೆ ಅಷ್ಟು ದೂರದವರೆಗೂ ಕಿಡಿ ಚಿಟಿ ಚಿಟಿಗುಟ್ಟುತ್ತಾ ಹಾರುತ್ತದಂತೆ. ಈ ಎರಡು ಉಪಾಯ ಹೊರತು ಬೇರೇನು ಮಾಡಿದರೂ ಅವು ಕದಲುವುದಿಲ್ಲ. ಈ ಪ್ರಯತ್ನದಲ್ಲಿ ಅವಕ್ಕೆ ಕೆಲವೊಮ್ಮೆ ಜನ ಬಲಿಯಾಗುವುದೂ ಉಂಟು.

ಕಾಡಾನೆಗಳನ್ನು ಓಡಿಸಲು ದೊಡ್ಡ ಬೆಂಕಿ ದೊಂದಿಗಳನ್ನು ಉರಿಸಿಕೊಂಡು, ಡಬ್ಬಿ, ನಗಾರಿಗಳನ್ನು ಬಾರಿಸುತ್ತಾ ನೂರಾರು ಜನ ಅಷ್ಟು ದೂರದಿಂದ ಎಲ್ಲ ಕಡೆಯಿಂದಲೂ ಅವುಗಳ ಬೆನ್ನಟ್ಟುತ್ತಾರೆ ಎಂದು ನಾವೆಲ್ಲ ಶಾಲೆಯ ಪುಸ್ತಕಗಳಲ್ಲಿ ಓದುತ್ತಿದ್ದೆವು. ಆಗ ಅವು ಹೀಗೆಲ್ಲ ಊರೊಳಗೆ ಬರುತ್ತಲೂ ಇರಲಿಲ್ಲ. ಆದರೆ ಈಗ ಕಾಲ ಬದಲಾದಂತೆ ಆನೆಗಳೂ ಅವುಗಳ ವಿರುದ್ಧ ಮನುಷ್ಯರೂ ಪರಸ್ಪರ ಬಹಳ ಧೈರ್ಯವಹಿಸಬೇಕಾಗಿದೆ.

ಬಿದಿರಿನ ಸೊಪ್ಪು ಆನೆಗಳ ಅತ್ಯಂತ ಪ್ರಿಯವಾದ ಆಹಾರಗಳಲ್ಲೊಂದು. ಅದಕ್ಕಾಗಿ ಅವು ಕೆಲವೊಮ್ಮೆ ದೂರ ದೂರ ಅಲೆಯುವುದೂ ಸಾಧ್ಯ. ಭದ್ರಾ ಅಭಯಾರಣ್ಯದಲ್ಲಿ ಕಾಡಾನೆಗಳಿಗೆ ಯಥೇಚ್ಛವಾಗಿ ಬಿದಿರು ಸೊಪ್ಪು ಸಿಗುತ್ತಿತ್ತು.

ಆದರೆ ಕಳೆದ ವರ್ಷ ಒಣ ಬಿದಿರು ಕಡಿಯುವ ಗುತ್ತಿಗೆ ನೀಡಲಾಗಿದೆ. ಅವರು ಬರೀ ಒಣಗಿದ ಬಿದಿರು ಮಾತ್ರ ಕಡಿಯಬೇಕೆಂಬ ನಿಯಮವಿದ್ದರೂ, 'ಇಲ್ಲಿಂದ ಅಲ್ಲಿಯವರೆಗಿನ' ಸಿಬ್ಬಂದಿಗಳಿಗೆ ತಿನ್ನಿಸಬೇಕಾದ ಲಂಚ, ತಮ್ಮ ಲಾಭದ ಹಿರಿಯಾಸೆ ಎಲ್ಲ ಪೂರೈಸಬೇಕಾದರೆ ಹಸಿ ಬಿದಿರನ್ನೇ ಕಡಿದು ಹಾಕಿ, ಒಣಗಿಸಿ, ಸಾಗಿಸುತ್ತಾರೆ. ಅಲ್ಲಿಗೆ ಕಾಡಾನೆಗಳು ಬರದಂತೆ ರಾತ್ರಿ ವೇಳೆ ದೊಡ್ಡ ದೊಡ್ಡ ಬೆಂಕಿ ಹಾಕಿ ಕೊಳ್ಳುತ್ತಾರೆ.

ನಾನ್ನೂರು-ಐನೂರು ಜನ ಕೆಲಸಗಾರರು ಅಲ್ಲೇ ಬೀಡು ಬಿಟ್ಟಿರುವುದು, ಬಿದಿರಿನ ನಾಶ, ಭೀಕರ ಬೆಂಕಿಯ ಭಯ ಇವೆಲ್ಲವುಗಳಿಂದಾಗಿ ಅಲ್ಲಿ ಸ್ವೇಚ್ಛೆಯಾಗಿ ವಿಹರಿಸಿಕೊಂಡಿದ್ದ ಕಾಡಾನೆಗಳೀಗ ಸುತ್ತಮುತ್ತ[illegible] ಜಮೀನು–ಜನವಸತಿಗಳಲ್ಲಿ ಅಂಡಲೆಯ[illegible] ತೊಡಗಿವೆ.

ಈ ಮೂಲಕಾರಣ ತೊಡೆದು ಹಾಕಿ [illegible] ನೆಗಳ ಹಾವಳಿ ತಪ್ಪಿಸುವಂತೆ ಜನ ಮಾಡಿ[illegible] ಮನವಿಗಳಿಗೆ ಈ ಲಾಭ ಬಡುಕರ ಜಾಲ[illegible] ನ್ನು ಭೇದಿಸುವ ಶಕ್ತಿಯಿಲ್ಲವಾಗಿದೆ, [illegible] ಯಿಲ್ಲವಾಗಿದೆ. ಹೀಗೆಂದು ವರದಿಗ[illegible] ಹೇಳುತ್ತವೆ.

§ § §

ಹೀಗೆ—ಯಾರದೋ ದುರಾಸೆ, ಬೇಜ[illegible] ಬ್ದಾರಿ, ಅದನ್ನು ನಿವಾರಿಸುವ ಬದಲು [illegible] ರಲ್ಲಿ ಶಾಮೀಲಾಗಿರುವ ಅಧಿಕಾರ ವ್ಯವ[illegible] —ಇವೆಲ್ಲವುಗಳಿಂದಾಗಿ ಒಂದೆಡೆ ಆ ಮೂ[illegible]

(3ನೇ ಪುಟ[illegible]

ಮಾವುತನ ಕೊಂದು ಕಣ್ಣೀರಿಟ್ಟಿತು ಆನೆ

ಈ ಸಲದ ಗಣರಾಜ್ಯೋತ್ಸವದಂದು ಮೂಡಿಗೆರೆಯಲ್ಲಿ ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಒಂದು 51 ವರ್ಷದ ಸಾಕಿದ ಆನೆ ಭಾಗವಹಿಸಿತ್ತು. ಮೆರವಣಿಗೆ ಮುಗಿಸಿ ಹಿಂದೆ ಬರುವಾಗ ಮಾವುತ ಗಡಂಗಿನ ಮುಂದೆ ಆನೆಯನ್ನು ನಿಲ್ಲಿಸಿ ಅಲ್ಲೇ ಇರಲು ಹೇಳಿ ಕುಡಿಯಲು ಹೋದ. ಆನೆ ಸ್ವಲ್ಪ ಮುಂದೆ ಹೋಗಿ ಒಂದು ಮನೆಯ ಮುಂದೆ ನಿಂತಿತು. ಕಂಠಪೂರ್ತಿ ಕುಡಿದು ಬಂದ ಮಾವುತ ಆನೆಗೆ ಅಂಕುಶದಿಂದ ಜೋರಾಗಿ ತಿವಿದ. ನೋವಿನಿಂದ ಚೀತ್ಕರಿಸಿದರೂ ಆನೆ ಆತನನ್ನು ಕೇವಲ ಸೊಂಡಿಲಿನಿಂದ ದೂಡಿತು ಆತ ಪುನಃ ಅದರ ಸೊಂಡಿಲಿಗೆ ಅಂಕುಶದಿಂದ ಬಲವಾಗಿ ಹೊಡೆದ. ತಾಳಲಾರದ ನೋವಿನಿಂದ ತತ್ತರಿಸಿದ ಆನೆ ಆತನನ್ನೆತ್ತಿ ಅಪ್ಪಳಿಸಿ ಕಾಲಿನಿಂದ ಹೊಸಕಿ ಹಾಕಿತು.

ನೋವಿನಲ್ಲಿ ತಾನೇನು ಮಾಡುತ್ತಿದ್ದೇನೆಂದು ಅದಕ್ಕೆ ಗೊತ್ತಾಗುವ ಮೊದಲೇ ದುರಂತ ಆಗಿ ಹೋಗಿತ್ತು. ಆದರೆ ತನ್ನ ಪ್ರೀತಿಯ ಮಾವುತನನ್ನು ತಾನೇ ಕೊಂದೆನೆಂದು ಅದಕ್ಕೆ ಅರಿವಾದಾಗ ಅದು ಅನ್ನ ನೀರು ಮುಟ್ಟದೆ ಎರಡು ದಿನ ಕಣ್ಣೀರಿಟ್ಟು ರೋದಿಸಿತು.

ಪದ್ಯದಂಕಣ

ಹೆಂಡತಿ

ಗಿಡಕೊಂದು ಬಳ್ಳಿ ಸುತ್ತಿ
ದೊಡ್ಡದಾಗಿ ಬೆಳೆದು ಕುತ್ತಿಗೆಯ
ಬಿಗಿದು ಉಸಿರು ಕಟ್ಟಿಸಿರುವ
ಬಳುಕುವ ಬೆಡಗಿನ ಬೆಳ್ಳುಳ್ಳಿ
ಕಟುವಾಸನೆ ನನ್ನ ಹೆಂಡತಿ....
ಹೆದರಿ ಮನದಲಿ ಹಳಿದು
ಹೊರಗೆ ಬಾಯಲಿ ಹೊಗಳಿ
ಎನ್ನುವೆ, 'ನೀನೇ ಜಾಣೆ'
ಹಗಲೆಲ್ಲ ಬುಸುಗುಟ್ಟಿ
ಇರುಳೆಲ್ಲ ಪಿಸುಗುಟ್ಟಿ
ನಿದ್ದೆ ಕೆಟ್ಟಿ ಬುದ್ಧಿ ಕೆಟ್ಟಿ
ಆದರೂ ಸವಿಯುಂಟು ಈ ಬವಣೆ

§ §

ಹತ್ತು ಜನ ಕೂಗಿದರೆ ...

ಮತದಾನ ಮತ್ತೊಮ್ಮೆ ಮರುಕಳಿಸಿದಾಗ
ಅತಿ ವಿನಯ ಸ್ಮಿತವದನ ಹುರಿಯಾಳು
ಈಗ
ಒತ್ತುವರು ಮುದುರೆಯನು ತಿಳಿಯದೆಯೊ
ತಿಳಿದೊ
ಹತ್ತು ಜನ ಕೂಗಿದರೆ ಕರಿನಾಯಿ ಬಿಳಿದು

—ನಾಶಾಸ್ತ್ರಿ

ಧರ್ಮ ಸಮನ್ವಯವೋ, ಸ್ವಯಂ ಹೆಗ್ಗಳಿಕೆಯೋ?

ಧರ್ಮಸಂಸ್ಥಾನ, ಧಾರ್ಮಿಕ ಕ್ಷೇತ್ರ ಎನ್ನಿಸಿಕೊಂಡಿರುವ ಕಡೆಗಳಲ್ಲೆಲ್ಲ ದೊಡ್ಡ ಸಮಾರಂಭಗಳೇನಾದರೂ ನಡೆದಾಗ ಅದರ ಅಂಗವಾಗಿ ಧರ್ಮ ಸಮ್ಮೇಳನ, ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದು ಈಚೆಗೆ ಒಂದು ಪದ್ಧತಿಯಾಗುತ್ತಿದೆ.

ಇಂಥ ಸಮ್ಮೇಳನದಲ್ಲಿ ಏನು ಪ್ರತಿಪಾದನೆಯಾಗುತ್ತದೆ? ಯಾವುದು ಮೆರೆಯುತ್ತದೆ? ಜನರನ್ನು ಛಿದ್ರ ಛಿದ್ರವಾಗಿ ಒಡೆದಿಟ್ಟಿರುವ ವಿವಿಧ ಧರ್ಮಗಳ ಸಾಮಾನ್ಯ ಅಂಶಗಳನ್ನು ಗುರುತಿಸಿ ಅವುಗಳ ಆಧಾರದ ಮೇಲೆ ಧರ್ಮ ಸಮನ್ವಯದ, ಜನರನ್ನು ಒಂದುಗೂಡಿಸುವ ಪ್ರಯತ್ನಗಳೇನಾದರೂ ನಡೆಯುತ್ತವೆಯೋ ಅಥವಾ ಎಂದಿನಂತೆ ತಮ್ಮ ತಮ್ಮ ಕೋಡೇ ಮೇಲೆ ಎಂದು ಸಮರ್ಥಿಸಿಕೊಳ್ಳುವ ಕಸರತ್ತುಗಳು ನಡೆಯುತ್ತವೆಯೋ?

ತಾವು ಕಟ್ಟಾ ಧರ್ಮಾನುಯಾಯಿಗಳು ಎಂದುಕೊಳ್ಳುವ ಕೆಲವು ವ್ಯಕ್ತಿಗಳಿಗೆ ಇಂಥ ಪ್ರಶ್ನೆಗಳು ಅಸಹನೆಯಾಗಬಹುದು. ಅಸಂಬದ್ಧ, ಅಧಿಕಪ್ರಸಂಗ ಎನ್ನಿಸಬಹುದು. ಆದರೆ ಪ್ರಶ್ನೆ, ವಾದ, ವಿಮರ್ಶೆಗಳಿಂದ ಜ್ಞಾನ ಹೆಚ್ಚುತ್ತದೆ, ಸತ್ಯ ಹತ್ತಿರವಾಗುತ್ತದೆ-ವಾದೇ ವಾದೇ ಜಾಯತೇ ತತ್ವಬೋಧಃ-ಎಂಬುದರಲ್ಲಿ ನಂಬಿಕೆಯಿರುವವರು ಇಂಥ ಪ್ರಶ್ನೆಗಳನ್ನು, ಅವಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಸ್ವಾಗತಿಸಿಯಾರು.

ಈ ಹಿನ್ನೆಲೆಯಲ್ಲಿ, ಮೊನ್ನೆ ಫೆ. 2 ಮತ್ತು 3 ರಂದು ಶೃಂಗೇರಿಯಲ್ಲಿ ನಡೆದ ಧರ್ಮಸಮ್ಮೇಳನದ ಬಗ್ಗೆ ಅಲ್ಲಿನ ನಮ್ಮ ವರದಿಗಾರರಾದ ಕಲ್ಕುಳಿ ವಿಠಲ ಹೆಗ್ಡೆಯವರ ವಿಮರ್ಶಾತ್ಮಕ ವರದಿಯನ್ನು ಇಲ್ಲಿ ಪ್ರಕಟಿಸಿದೆ.

ಫೆ. 2 ಮತ್ತು 3 ರಂದು ಶೃಂಗೇರಿಯಲ್ಲಿ ನಡೆದ ಧರ್ಮ ಸಮ್ಮೇಳನದಲ್ಲಿ ಭಾಷಣ ಮಾಡಿದ ವಿದ್ವಾಂಸರುಗಳು ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಜೈನ, ಮುಂತಾದ ದರ್ಶನಗಳ ತಾತ್ವಿಕ ನಿಲುವುಗಳನ್ನು ಸಮರ್ಥಿಸಿದರು. ಈ ವಿದ್ವಾಂಸರುಗಳೆಲ್ಲ ಶಾಸ್ತ್ರ ನಿಷ್ಠೆಯನ್ನಲ್ಲದೆ ಮತ್ತೇನನ್ನೂ ಹೇಳದಿದ್ದುದು ಗಮನಾರ್ಹವಾಗಿತ್ತು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಪ್ರೊ|| ಎಸ್. ಎಸ್. ರಾಘವಾಚಾರ್ ಹೇಳಿದ್ದು ಆಧುನಿಕ ಚಿಂತಕರನ್ನೂ ಸೆಳೆಯುವಂತಿತ್ತು. ಅವರು. "ದರ್ಶನಗಳಲ್ಲಿ ಜಗತ್ತಿನ ಚಿಂತಕರಲ್ಲಿ ಎರಡು ಮುಖ್ಯ ನೆಲೆಗಳಿವೆ. ಒಂದು, ಇಂದ್ರಿಯ ಗ್ರಾಹ್ಯವಾದದ್ದು ಮಾತ್ರ ಸತ್ಯವೆಂದು ತಿಳಿಯುವುದು. ಇನ್ನೊಂದು, ಇಂದ್ರಿಯಗ್ರಾಹ್ಯವಲ್ಲದ, ಅದಕ್ಕೂ ಮೀರಿದ ಇಂದ್ರಿಯಾತೀತ ಸತ್ಯವೊಂದು ಇದೆಯೆಂದು ನಂಬುವುದು.

ನಮ್ಮ ದರ್ಶನಗಳೆಲ್ಲವೂ ಇಂದ್ರಿಯಾತೀತ ಸತ್ಯವನ್ನು ಒಪ್ಪಿಕೊಂಡು ಅದನ್ನು "ಬ್ರಹ್ಮ" ಎಂಬ ಮಾತಿನಲ್ಲಿ ಸೂಚಿಸಿವೆ. ದ್ವೈತ, ಅದ್ವೈತಾದಿ ಪಂಥಗಳಲ್ಲಿ "ಬ್ರಹ್ಮಸತ್ಯ"ದ ಬಗ್ಗೆ ಸಂಶಯವಿಲ್ಲ. ಆದರೆ ಈ ಜಗತ್ತಿನ ಬಗ್ಗೆ ಈ ಪಂಥಗಳಲ್ಲಿ ಭಿನ್ನಾಭಿಪ್ರಾಯವಿದೆ.

ಬ್ರಹ್ಮಸತ್ಯದ ಬಗ್ಗೆ ಒಪ್ಪಿಕೊಂಡ ಮೇಲೆ ಉಳಿದ ವಿಚಾರಗಳಲ್ಲಿ ಇರಬಹುದಾದ ವಿವರಣೆಯ ವೈವಿಧ್ಯತೆಗಾಗಿ ಕಲಹ ಮಾಡುವುದು ಮೌಢ್ಯದ ಲಕ್ಷಣ" ಎಂದರು.

ಬೌದ್ಧ ದರ್ಶನವನ್ನು ಪ್ರಾಸಂಗಿಕವಾಗಿ ಉಲ್ಲೇಖಿಸಿದ ಅವರು, ಅದರಲ್ಲಿ ಹೇಳಿರುವ "ಅಷ್ಟಾಂಗ ಮಾರ್ಗ" ನಮ್ಮ ನೈತಿಕ ಪ್ರಜ್ಞೆಗೆ ಅನಿವಾರ್ಯವೆಂದರು.

ಆಶೀರ್ವಚನ ಮಾಡುತ್ತ ಭಾರತೀ ತೀರ್ಥರು ಪ್ರತಿಕ್ರಿಯಿಸಿದ ರೀತಿ ಮಾತ್ರ ವಿಚಿತ್ರವಾಗಿಯೂ ಆಶ್ಚರ್ಯಕರವಾಗಿತ್ತು. ಅವರು, "ಶಂಕರ ಭಗವತ್ಪಾದರ ನಂತರ ಬಂದ ಆಚಾರ್ಯರುಗಳು ಮೌಢ್ಯದ ಜಗಳಕ್ಕೆ ಕಾರಣರಾದರು" ಎಂದು ಪ್ರತಿಪಾದಿಸಿದ್ದು ರಾಘವಾಚಾರ್ಯರ ಸಮನ್ವಯ ಸೂತ್ರಕ್ಕೆ ಒಡ್ಡಿದ ಸವಾಲಾಗಿದ್ದುದು ದುರ್ದೈವ. (ಮಧ್ವಾಚಾರ್ಯ, ರಾಮಾನುಜಾಚಾರ್ಯರಾದಿಯಾಗಿ ಎಲ್ಲರೂ ಅನಂತರ ಬಂದವರು.)

ಜೈನ ದರ್ಶನದ ಬಗ್ಗೆ ಮಾತನಾಡಿದ ಭಾರತೀ ತೀರ್ಥರು, "ವೇದ ನಿಷ್ಠೆಯಿಲ್ಲದ ಧರ್ಮಗಳು, ಸಿದ್ಧಾಂತಗಳು ಸ್ಥಿರವಾಗಿ ನಿಲ್ಲಲಾರವು" ಎಂದರು.

ಈ ಬಗ್ಗೆ ನಾನು, ಜೈನ ದರ್ಶನದ ಬಗ್ಗೆ ಮಾತನಾಡಿದ ವಿದ್ವಾಂಸರ ಹತ್ತಿರ "ನಿಮ್ಮ ಜೈನ ದರ್ಶನ ವೇದ ನಿಷ್ಠವೆ?" ಎಂದು ವಿಚಾರಿಸಿದೆ. ಅದಕ್ಕವರು, "ಈ ಬಗ್ಗೆಯೆಲ್ಲ ಪ್ರತಿರೋಧಿಸಿದರೆ ಯಾವ ಪ್ರಯೋಜನವೂ ಇಲ್ಲ. ಇದು ಇಲ್ಲಿನ ಪರಂಪರೆ. ಅವರು ಹೇಳಿಕೊಳ್ಳಲಿ. ಅದರಿಂದ ಜೈನ, ಬೌದ್ಧ ದರ್ಶನಗಳ ಮಹತ್ವ ಕುಂದುವುದಿಲ್ಲ. ಬಂದಿದ್ದಕ್ಕೆ ಮರ್ಯಾದೆ ಕೊಟ್ಟು ಹೋಗುವುದು" ಎಂದರು.

—ಕಲ್ಕುಳಿ ವಿಠಲ ಹೆಗ್ಡೆ.

ಮೇಲ್ಪಾಲು: ಬಗೆಹರಿಯದ ಸಮಸ್ಯೆಗಳ ಸಾಲು ಸಾಲು

ಮೇಲ್ಪಾಲು: ನರಸಿಂಹರಾಜಪುರ ತಾ|| ಕರ್ಕೇಶ್ವರ ಪಂಚಾಯ್ತಿಯ ಮುಖ್ಯ ಸ್ಥಳವಾಗಿರುವ ಮೇಲ್ಪಾಲು ಮತ್ತು ಅದರ ಸುತ್ತಮುತ್ತಲ ಹತ್ತಾರು ಹಳ್ಳಿಗಳ ಸಮಸ್ಯೆಯ ವ್ರಣಗಳು ಒಂದು ಜನಸಂಪರ್ಕ ಸಭೆಯ ಇಂಜೆಕ್ಷನ್‌ನಿಂದಲೂ ಗುಣವಾಗಿಲ್ಲ. ಇನ್ನು ಇದಕ್ಕೆ ಶಸ್ತ್ರಚಿಕಿತ್ಸೆಯೇ ಆಗಬೇಕೋ, ಕಾಯಕಲ್ಪವೋ, ಅದನ್ನು ಮಾಡುವವರು ಎಲ್ಲಿದ್ದಾರೋ—ಜನಕ್ಕೆ ಗೊತ್ತಿಲ್ಲವಾಗಿದೆ.

ಕಳೆದ ಸೆಪ್ಟೆಂಬರ್ 10 ರಂದು ಇಲ್ಲಿ ಜಿಲ್ಲಾಧಿಕಾರಿಗಳ ಜನಸಂಪರ್ಕ ಸಭೆ ನಡೆಯಿತು. ಶಾಸಕ ಗೋವಿಂದ ಗೌಡರೂ ಅದರಲ್ಲಿ ಭಾಗವಹಿಸಿದ್ದರು. ಆಗ ಸುಮಾರು 20 ಕ್ಕೂ ಹೆಚ್ಚು ಸಮಸ್ಯೆಗಳ ಪಟ್ಟಿ ಮಾಡಿ ಅವುಗಳನ್ನು ಬಗೆಹರಿಸಲು ಗ್ರಾಮಸ್ಥರು ಮನವಿಯೊಂದನ್ನು ಸಲ್ಲಿಸಿದ್ದರು. ಯಥಾಪ್ರಕಾರ ಅವಕ್ಕೆಲ್ಲ 15 ದಿನ, ತಿಂಗಳು—ಹೀಗೆ ನಿರ್ದಿಷ್ಟ ಗಡುವಿನೊಳಗೆ ಪರಿಹಾರ ಒದಗಿಸುವ ಭರವಸೆಯೂ ಸಿಕ್ಕಿತ್ತು.

ಆ ಪೈಕಿ ಗುಬ್ಬೂರು–ಗಡಿಗೇಶ್ವರ ರಸ್ತೆ ರಿಪೇರಿ, ಮೇಲ್ಪಾಲು–ಹುಣಸೆಕೊಪ್ಪ–ಗುಬ್ಬೂರು ಮಾರ್ಗವಾಗಿ ಕಟ್ಟಿನಮನೆಗೆ ರಸ್ತೆ ಸಂಪರ್ಕ, ಮೇಲ್ಪಾಲು ಕುಡಿವನೀರು ಯೋಜನೆ ಬಾವಿಯ ದುರಸ್ತಿ, ಮುಂತಾದ ಒಂದೆರಡು ಸಮಸ್ಯೆಗಳು ಮಾತ್ರ ತಕ್ಕಮಟ್ಟಿಗೆ ಬಗೆಹರಿದಿವೆ.

ಅಲ್ಲದೆ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಿಗೆ ಉಪಾಧ್ಯಾಯರ ತೀವ್ರ ಕೊರತೆಯಿದ್ದುದು ತಾತ್ಕಾಲಿಕವಾಗಿ ಬಗೆಹರಿದಿದೆಯಾದರೂ ಅದು ಆದುದು ಗ್ರಾಮಸ್ಥರು ಮನವಿಗಳನ್ನೂ ಪತ್ರ ವ್ಯವಹಾರವನ್ನೂ ಮಾಡಿ ಮಾಡಿ, ಪತ್ರಿಕೆಗಳಲ್ಲೆಲ್ಲ ಬಂದ ಮೇಲೆಯೇ.

ಅಷ್ಟಾದರೂ ಪ್ರೌಢಶಾಲೆಯ ಖಾಯಂ ಮುಖ್ಯೋಪಾಧ್ಯಾಯರ ಕೊರತೆ ಇನ್ನೂ ಭರ್ತಿಯಾಗಿಲ್ಲ.

ಉಳಿದಂತೆ, ಬಾಳೆಹಿತ್ಲು, ಗುಬ್ಬೂರುಗಳಿಗೆ ವಿದ್ಯುಚ್ಛಕ್ತಿ, ಅಲ್ಲಲ್ಲಿನ ಜನತಾ ಮನೆಗಳಿಗೆ ಕುಡಿವ ನೀರು, ಗುಬ್ಬೂರು, ಹಾರೆಕೊಪ್ಪಗಳ ಗದ್ದೆ ನೀರಿಗಾಗಿ ಹಳ್ಳಕ್ಕೆ ಅಣೆಕಟ್ಟು, ಕೊಪ್ಪ–ಮೇಲ್ಪಾಲು ರಸ್ತೆಯಲ್ಲಿ ನಡುವೆ ಸುಮಾರು ಆರೇಳು ಕಿ.ಮೀ. ರಸ್ತೆ ಪೂರ್ಣ ಹದಗೆಟ್ಟಿದ್ದು ಅದನ್ನು ಪೂರ್ತಿ ಟಾರು ಮಾಡಿಸಿ, ಈ ಮಾರ್ಗವಾಗಿ ಬಾಳೆಹೊನ್ನೂರಿಗೆ ಹೆಚ್ಚಿನ ಬಸ್ಸು ಸೌಲಭ್ಯ ಕಲ್ಪಿಸುವುದು, ಮೇಲ್ಪಾಲಿಗೆ ಜಾನುವಾರು ಆಸ್ಪತ್ರೆ, ಈಗಿರುವ ಆಯುರ್ವೇದ ಆಸ್ಪತ್ರೆಯನ್ನೂ ಒಳಗೊಂಡಂತೆ ಒಂದು ಪ್ರಾಥಮಿಕ ಆರೋಗ್ಯ ಘಟಕ, ಬಾಳೆಹಿತ್ಲು ಜನತಾ ಮನೆಗಳಿಗೆ ಭಾಗ್ಯಜ್ಯೋತಿ, ಶಾಲಾ ಅಧ್ಯಾಪಕರ ವಸತಿಗಳು, ಪ್ರೌಢಶಾಲೆಗೆ ಕಟ್ಟಡ ಕಟ್ಟಲು ಎನ್.ಆರ್.ಇ.ಪಿ.ಯಿಂದ ನೆರವು ಮುಂತಾದ ಯಾವುದೇ ಸಮಸ್ಯೆಯೂ ಬಗೆಹರಿದಿಲ್ಲವೆಂಬುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಜನಸಂಪರ್ಕ ಸಭೆಯಲ್ಲಿ ಮೇಲ್ಪಾಲಿನ ಹರಿಜನರು 'ವಿಶೇಷ ಯೋಜನೆ' ಯನ್ವಯ ಹೈನುಗಾರಿಕೆಗೆ ಮೇಲ್ಪಾಲು ಕರ್ಣಾಟಕ ಬ್ಯಾಂಕಿನ ಮೂಲಕ ನೆರವು ಕೇಳಿದ್ದರು (ಶೇ. 60 ಸಹಾಯಧನ). ಶಾಸಕರೂ ಜಿಲ್ಲಾಧಿಕಾರಿಗಳೂ ಕೊಡಿಸಲು ಒಪ್ಪಿದ್ದು ಮಾತ್ರವಲ್ಲ, "ಹೀಗೆ ಕೊಡಿಸಿದ ಎಮ್ಮೆಗಳನ್ನು ಸರಿಯಾಗಿ ಸಾಕದೆ ಯಾರಿಗಾದರೂ ಮಾರಿಕೊಂಡರೆ ಪೋಲೀಸರಿಗೆ ಕೊಡ್ತೇವೆ" ಎಂದು ಶಾಸಕರು ಎಚ್ಚರಿಸಿದ್ದೂ ಉಂಟು.

ಆದರೆ ಈಗ ಅರ್ಜಿ ಏನಾಯಿತೆಂಬುದೇ ಗೊತ್ತಿಲ್ಲ ಎಂಬುದು ಹರಿಜನರ ದೂರು. ಈಗ ಪುನಃ ಅರ್ಜಿ ಮಾಡಿದ್ದಾರೆ.

ಮೇಲ್ಪಾಲು ಹರಿಜನ ಕಾಲೊನಿಯ ಬಳಿಯಿದ್ದ ಬೋರ್‌ವೆಲ್‌ನಲ್ಲಿ ಒಳ್ಳೆಯ ನೀರು ಬರುತ್ತಿತ್ತು. ಕಳೆದ ವರ್ಷ ರಿಪೇರಿ ಮಾಡುವಾಗ ಕೆಲವು ಸಲಕರಣೆ ಬಾವಿಯಲ್ಲಿ ಬಿದ್ದು ಹೋಗಿ ನೀರು ಬರುವುದು ನಿಂತಿದೆ. ಈ ವಿಷಯವನ್ನೂ ಜನಸಂಪರ್ಕ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಕೂಡಲೇ ಅಗತ್ಯ ಸಲಕರಣೆ ತರಿಸಿ ಆ ಬಾವಿಯನ್ನೇ ರಿಪೇರಿ ಮಾಡಿಸುವುದಾಗಿ, ಆಗದಿದ್ದರೆ ಅಲ್ಲೇ ಇನ್ನೊಂದು ಬಾವಿ ತೋಡಿಸುವುದಾಗಿ ಜಿಲ್ಲಾಧಿಕಾರಿ ಹೇಳಿದ್ದರು. ಭರವಸೆ ಕಾರ್ಯಗತವಾಗಿಲ್ಲ.

ಇನ್ನು ಇಲ್ಲಿನ ಪ್ರೌಢಶಾಲೆ ಮುಖ್ಯೋಪಾಧ್ಯಾಯರ ನೇಮಕಾತಿಯದು ಸಿಕ್ಕುಗೊಳಿಸಲ್ಪಟ್ಟ ಒಂದು ಸರಳ ಸಮಸ್ಯೆ, ಅಥವಾ ಸಮಸ್ಯೆಯೇ ಅಲ್ಲ. 28.1.84 ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಕಮಿಶನರ್‌ರವರ ಕಚೇರಿಯ ಆದೇಶದಂತೆ ರಾಜ್ಯವ್ಯಾಪಿ ನೇಮಕಾತಿಗಳಲ್ಲಿ ಇಲ್ಲಿಗೆ ಧನಪಾಲ್ ಎಂಬವರನ್ನು ನಿಯುಕ್ತಿ ಮಾಡಲಾಗಿತ್ತು. ಅವರು ಬರಲಿಲ್ಲ. 1984 ರ ನವೆಂಬರ್‌ನಲ್ಲಿ ಇಲಾಖೆಯಿಂದ ಕ್ರಮ ಜರುಗಿಸುವ ಎಚ್ಚರಿಕೆ ಪತ್ರ ಅವರಿಗೆ ಹೋಗಿದೆ. ಅನಂತರ ಟೆಲಿಗ್ರಾಂ ಮೂಲಕ ಕೂಡ ಅವರಿಗೆ ಆದೇಶ ಹೋಗಿದೆಯೆನ್ನಲಾಗಿದೆ. ಆದರೂ ಮುಖ್ಯೋಪಾಧ್ಯಾಯರು ಬರಲಿಲ್ಲ. ಅವರಲ್ಲದಿದ್ದರೆ ಬೇರೆಲ್ಲೂ ಯಾರೂ ಮುಖ್ಯೋಪಾಧ್ಯಾಯರು ಅಥವಾ ಆಗಬಲ್ಲವರು ಇಲಾಖೆಗೆ ಸಿಗುವುದಿಲ್ಲವೆ? ಎಂದು ಜನ ಕೇಳುತ್ತಾರೆ.

ಈ ಊರು ಯಾವ ರೀತಿಯಲ್ಲೂ ಬೆಳವಣಿಗೆ, ಸುಧಾರಣೆ ಕಾಣದಿರುವುದಕ್ಕೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಈ ಪ್ರದೇಶ ಕಾಂಗ್ರೆಸ್‌ಗೆ ಒಲಿದಿತ್ತು ಎಂಬುದು ಕಾರಣವೆ? ಎಂದೂ ಜನ ಕೇಳುತ್ತಾರೆ.

ಇಷ್ಟೆಲ್ಲ ಸಮಸ್ಯೆಗಳ ಪೈಕಿ ಆಗಬಹುದಾಗಿದ್ದ ಕೆಲಸಗಳೂ ಈ ಚುನಾವಣೆಗಳ ಹಾವಳಿಯಿಂದಾಗಿ ಆಗಲಾರದಂತಾಗಿರುವುದೂ ಜನರಿಗೆ ಗೊತ್ತಿದೆ. ಹೀಗೇ ಮುಂದುವರಿದರೆ ಇವರೆಲ್ಲ ಚುನಾವಣೆಗಳನ್ನೇ ಬಹಿಷ್ಕರಿಸಿದರೂ ಆಶ್ಚರ್ಯವಿಲ್ಲ.

ಮುಗ್ಧ ಆನೆಗಳ ಬಲಿ

(2ನೇ ಪುಟದಿಂದ)

ಮುಗ್ಧ ಬಲಿಷ್ಠವಾಗಿದ್ದೂ ಅಸಹಾಯಕವಾಗಿರುವ ಪ್ರಾಣಿಗಳು, ಪ್ರಕೃತಿಯಲ್ಲಿ ನಮ್ಮ ಒಡಹುಟ್ಟಿದವುಗಳು, ಬಲಿಯಾಗುತ್ತಿವೆ. ಇನ್ನೊಂದೆಡೆ, ಅಷ್ಟೇ 'ಮೂಕರು, ಮುಗ್ಧರು, ಬಲಿಷ್ಠವಾಗಿಯೂ ಅಸಹಾಯಕರು' ಆಗಿರುವ ಪ್ರಕೃತಿಯ ಮಕ್ಕಳು, ನಮ್ಮ ಕಷ್ಟಜೀವಿ ರೈತರು ಈ ಜಾಲದಿಂದ ವಿನಾಶಕ್ಕೀಡಾಗುತ್ತಿದ್ದಾರೆ.

ಬೇರೆ ದೇಶಗಳಲ್ಲಾದರೆ, ಕದಲಲಾಗದೆ ನಿಂತಿದ್ದ ಆನೆಯ ಮೇಲೆ ಗುಂಡಿನ ಮಳೆಗರೆಸಿದ ಪೋಲೀಸ್ ಕ್ರೂರನ ವಿವೇಚನೆ ಬಗ್ಗೆ ತೀವ್ರ ತನಿಖೆ ನಡೆದು ತಪ್ಪಿಗೆ ತಕ್ಕ ಶಿಕ್ಷೆಯಾಗುತ್ತಿತ್ತು; ದೇಶದ ಸಂಪನ್ಮೂಲ ಸಂಗ್ರಹಣೆಯ ಜೊತೆಗೆ ಪ್ರಕೃತಿಯ ಪ್ರಶಾಂತ ಸಮತೋಲನ ಅಸ್ತವ್ಯಸ್ತವಾಗದಂತೆ ಕಟ್ಟುನಿಟ್ಟು ಇರುತ್ತಿತ್ತು.

ಆದರೆ ನಮ್ಮ ದೇಶದಲ್ಲಿ ಅವಕ್ಕೆಲ್ಲ ಅವಕಾಶ ಇಲ್ಲವಲ್ಲ!

—ಸಿರಿಮನೆ ನಾಗ…

ಬಿಜಾಪುರದ ಪತ್ರಿಕೆ ಕಚೇರಿಯ ಬೀಗಮುದ್ರೆ ತೆರವಿಗೆ ಆಗ್ರಹ

ಚಿಕ್ಕಮಗಳೂರು: ಬಿಜಾಪುರದ 'ಉತ್ತರ ಕರ್ನಾಟಕ' ಕನ್ನಡ ದಿನಪತ್ರಿಕೆಯ ಕಾರ್ಯಾಲಯಕ್ಕೆ ಅಲ್ಲಿನ ಜಿಲ್ಲಾಧಿಕಾರಿಗಳು ಬೀಗಮುದ್ರೆ ಹಾಕಿಸಿರುವುದನ್ನು ಕೂಡಲೇ ತೆರವು ಮಾಡಿಸಬೇಕೆಂದು ಚಿಕ್ಕಮಗಳೂರು ಜಿಲ್ಲಾ ಪತ್ರಕರ್ತರ ಸಂಘ ಒತ್ತಾಯಿಸಿದ್ದು, ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಯೊಂದನ್ನು ಸಲ್ಲಿಸಿದೆ.

ರಾಜ್ಯ ಸರ್ಕಾರ ಗ್ರಾಮಾಂತರ ಪತ್ರಕರ್ತರ ಸಮಸ್ಯೆಗಳ ಬಗ್ಗೆ ರಚಿಸಲಿರುವ ವಿಭಾಗ ಸಮಿತಿಗೆ ಜಿಲ್ಲಾ ಸಂಘದ ವತಿಯಿಂದ ಅಧ್ಯಕ್ಷ ಹೆಚ್.ಕೆ.ನರಸಿಂಹಮೂರ್ತಿ, ಕೆ. ಹೆಚ್.ನಾರಾಯಣ, ಹೆಚ್. ಸಿ. ವೆಂಕಟರಾಮಯ್ಯ ಇವರುಗಳ ಹೆಸರನ್ನು ಸೂಚಿಸಲು ಫೆ. 10 ರಂದು ಅಜ್ಜಂಪುರದಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆ ತೀರ್ಮಾನಿಸಿತು.

ಮಂಡ್ಯದಲ್ಲಿ ಫೆ. 23, 24 ರಂದು ನಡೆಯುವ ರಾಷ್ಟ್ರೀಯ ಗ್ರಾಮಾಂತರ ಪತ್ರಕರ್ತರ ಸಮಾವೇಶಕ್ಕೆ ಸಂಘದ ಅಧ್ಯಕ್ಷ, ಕಾರ್ಯದರ್ಶಿಗಳಲ್ಲದೆ ಎ. ಎಸ್. ಚಂದ್ರಶೇಖರ್ ಮತ್ತು ಪಿ. ಎಲ್. ಗೋಪಾಲಕೃಷ್ಣ ಶೆಟ್ಟಿ ಇವರುಗಳನ್ನು ಪ್ರತಿನಿಧಿಗಳನ್ನಾಗಿ ಕಳಿಸಲು ನಿರ್ಧರಿಸಲಾಯಿತು.

ಸೇರ್ಪಡೆ

ಜಿಲ್ಲಾ ಕಾರ್ಯಕಾರಿ ಸಮಿತಿಯಲ್ಲಿ ಖಾಲಿಯಿದ್ದ ಸದಸ್ಯ ಸ್ಥಾನಗಳಿಗೆ ಎ. ಎಸ್. ಚಂದ್ರಶೇಖರ್, ಸಿರಿಮನೆ ನಾಗರಾಜ್, ಎಸ್. ಎಂ. ವೀರಭದ್ರಪ್ಪ, ಎಸ್. ಎನ್. ಮಂಜುನಾಥ್, ಜಿ. ಬಿ. ಮಲ್ಲಿಕಾರ್ಜುನ ಸ್ವಾಮಿ, ಗೋಪಾಲಕೃಷ್ಣ ಶೆಟ್ಟಿ ಇವರನ್ನು ಸೇರ್ಪಡೆ (ಕೋ-ಆಪ್ಟ್) ಮಾಡಿಕೊಳ್ಳಲಾಯಿತು.

ಶೃಂಗೇರಿ ತಾ॥ನಲ್ಲಿ 2 ಬೆಂಕಿ ಆಕಸ್ಮಿಕಗಳು

ಶೃಂಗೇರಿ: ಬೇಗಾರಿಗೆ ಸಮೀಪದ ಹೊಸಹಳ್ಳಿ ಯೋಗಪ್ಪಗೌಡ ಎಂಬವರ 4 ದನದ ಕೊಟ್ಟಿಗೆಗಳಿಗೆ ಜ. 22 ರಂದು ಬೆಂಕಿ ತಗುಲಿ ಸಂಪೂರ್ಣ ಸುಟ್ಟು ಹೋಗಿವೆ. 8 ದನಕರುಗಳು ಸತ್ತು ಕೃಷಿ ಉಪಕರಣಗಳು ಮತ್ತು ನಾಟ ನಾಶವಾಗಿದ್ದು, ಒಟ್ಟು ಸುಮಾರು 50 ಸಾವಿರ ರೂ. ನಷ್ಟ ಸಂಭವಿಸಿರುವುದಾಗಿ ತಿಳಿದು ಬಂದಿದೆ.

ಅದೇ ವಾರದಲ್ಲಿ, ಶೃಂಗೇರಿಯ ಸಣ್ಣ ಮಿಲ್ ಬಳಿ ಕಂದಾಯ ಇಲಾಖೆ ಉದ್ಯೋಗಿ ವಾಸುದೇವ ರಾವ್ ಎಂಬವರ ಮನೆಯ ಹಿಂದಿನ ಕೊಟ್ಟಿಗೆಗೆ ಬೆಂಕಿ ಹಿಡಿದಿತ್ತು. ಆದರೆ ಕುಂಭಾಭಿಷೇಕ ಮಹೋತ್ಸವಗಳ ನಿಮಿತ್ತ ಶೃಂಗೇರಿಯಲ್ಲಿ ಅಗ್ನಿ ಶಾಮಕ ದಳವೊಂದು ಇದ್ದುದರಿಂದ ಬೆಂಕಿ ಅಕ್ಕ ಪಕ್ಕ ವ್ಯಾಪಿಸದಂತೆ ತಡೆಗಟ್ಟಲು ಸಾಧ್ಯವಾಯಿತು. ಕೊಟ್ಟಿಗೆ ಮಾತ್ರ ಬಹು ಭಾಗ ಸುಟ್ಟುಹೋಯಿತು.

ಬಗೆಹರಿದ ಕಾರ್ಮಿಕ ವಿವಾದ: ಖಟ್ಲೆ ವಾಪಸು

ಚಿಕ್ಕಮಗಳೂರು: ಇಲ್ಲಿನ 'ಜನಮಿತ್ರ' ದಿನಪತ್ರಿಕೆಯ ಹಿಂದಿನ ಮಾಲೀಕರಾಗಿದ್ದ ಕೃ.ನ. ಮೂರ್ತಿಯವರು ಎಸ್. ಭಾಸ್ಕರ್ ಎಂಬವರನ್ನು ಯಾವುದೇ ಪರಿಹಾರ ಕೊಡದೆ ವಜಾ ಮಾಡಿದ್ದರ ವಿರುದ್ಧದ ವಿವಾದ 'ಕಾಫಿ ಕ್ಯೂರಿಂಗ್ ಮತ್ತು ಇತರ ಕಾರ್ಮಿಕರ ಸಂಘ'ದ ನೇತೃತ್ವದಲ್ಲಿ ಸಹಾಯಕ ಕಾರ್ಮಿಕ ಆಯುಕ್ತರ ಮುಂದೆ ದಾಖಲಾಗಿ, ಅನಂತರ ಮಂಗಳೂರಿನ ಕಾರ್ಮಿಕ ನ್ಯಾಯಾಲಯಕ್ಕೆ ವಹಿಸಲ್ಪಟ್ಟಿತ್ತು. ನಂತರ ಜ. 24 ರಂದು ಇಲ್ಲಿನ ಸ॥ ಕಾರ್ಮಿಕ ಆಯುಕ್ತರ ಸಮ್ಮುಖ ನಡೆದ ಸಂಧಾನದಲ್ಲಿ ಮಾಲೀಕರು ಭಾಸ್ಕರ್ ಅವರಿಗೆ 3,000 ರೂ. ಗಳನ್ನು ಕೊಟ್ಟಿದ್ದು, ನ್ಯಾಯಾಲಯದಿಂದ ವಿವಾದ ಹಿಂತೆಗೆದುಕೊಳ್ಳಲ್ಪಟ್ಟಿದೆಯೆಂದು ಕಾರ್ಮಿಕ ಸಂಘದ ಕಾರ್ಯದರ್ಶಿ ಎ.ಕೆ.ವಿಶ್ವನಾಥ್ ತಿಳಿಸಿದ್ದಾರೆ.

ಶೃಂಗೇರಿ ಮಠಕ್ಕೆ ಜಿಲ್ಲಾ ಪತ್ರಕರ್ತರ ಸಂಘದ ಬಹಿಷ್ಕಾರ ರದ್ದಾದ ಬಗೆ

ಚಿಕ್ಕಮಗಳೂರು: ಶೃಂಗೇರಿ ಮಠದ ಆಶ್ರಯದ ಕುಂಭಾಭಿಷೇಕ ಮಹೋತ್ಸವಗಳ ಸಂದರ್ಭದಲ್ಲಿ ಸಂಬಂಧಪಟ್ಟವರು ಜಿಲ್ಲೆಯ ಪತ್ರಕರ್ತರನ್ನು ಕಡೆಗಣಿಸಿದ್ದಾರೆಂದು ಜಿಲ್ಲಾ ಪತ್ರಕರ್ತರ ಸಂಘ ಪ್ರತಿಭಟಿಸಿ, ಜಿಲ್ಲೆಯ ಪ್ರಮುಖ ಪತ್ರಿಕೆಗಳು ಮಠದ ಕಾರ್ಯಕ್ರಮಗಳನ್ನು ಬಹಿಷ್ಕರಿಸುವ ನಿರ್ಧಾರ ತೆಗೆದುಕೊಂಡಿದ್ದಕ್ಕೆ, ಮಠದ ಆಡಳಿತಾಧಿಕಾರಿ ಮತ್ತು ಕುಂಭಾಭಿಷೇಕ ಮಹೋತ್ಸವಗಳ ಕಾರ್ಯನಿರ್ವಾಹಕ ಕಾರ್ಯದರ್ಶಿಗಳು ಸಂಘಕ್ಕೆ ಪ್ರತ್ಯೇಕ ಪತ್ರ ಬರೆದು ಉದ್ದೇಶಪೂರ್ವಕವಲ್ಲದ ಈ ಪ್ರಮಾದದ ಬಗ್ಗೆ ಖೇದ ವ್ಯಕ್ತಪಡಿಸಿದ ಕಾರಣ ಸಂಘ ಮತ್ತು ಪತ್ರಿಕೆಗಳು ಬಹಿಷ್ಕಾರವನ್ನು ಹಿಂತೆಗೆದುಕೊಂಡುದಾಗಿ ಸಂಘದ ಪ್ರಕಟಣೆ ತಿಳಿಸಿದೆ.

ಜಾನುವಾರು ಪರೀಕ್ಷೆ, ಚಿಕಿತ್ಸೆ

(1ನೇ ಪುಟದಿಂದ)

ಸಿಂಡಿಕೇಟ್ ಬ್ಯಾಂಕ್ ವಿಭಾಗ ಮ್ಯಾನೇಜರ್ ಎಂ.ಜೆ.ಶೆಟ್ಟಿ, ಕಾಫಿ ಬೋರ್ಡಿನ ಕೊಪ್ಪ ಸಂಪರ್ಕಾಧಿಕಾರಿ ಜಿ. ಎಸ್. ಶಿವಾರೆಡ್ಡಿ, ನ. ರಾ. ಪುರ ರೋಟರಿ ಕ್ಲಬ್ಬಿನ ಎ.ಪಿ.ಗೋವಿಂದೇಗೌಡ ಮುಖ್ಯ ಅತಿಥಿಗಳಾಗಿದ್ದರು.

ಇದೇ ಸಂದರ್ಭದಲ್ಲಿ ನಾರ್ಥ್ ಕರ್ನಾಟಕ ಬ್ಯಾಂಕ್‌ನವರೂ ಐ.ಆರ್.ಡಿ.ಪಿ. ಸಾಲಗಳನ್ನು ನೀಡಿದರು.

ಸಿಂಡಿಕೇಟ್ ಬ್ಯಾಂಕಿನ ಗ್ರಾ. ಅ. ಅಧಿಕಾರಿ ಎಂ.ಆರ್.ವಿ.ರೆಡ್ಡಿ ಸ್ವಾಗತಿಸಿ, ಕೃಷಿ ವಿ. ವಿ. ಕೇಂದ್ರದ ಕಾರ್ಯದರ್ಶಿ ಎಂ. ಆರ್. ಕಣ್ಣನ್ ವಂದಿಸಿದರು.

ಜನತಾ ಅಭ್ಯರ್ಥಿಗೆ ಬೆಂಬಲ: 2 ನಾಮಪತ್ರ ವಾಪಸು

ಕೊಪ್ಪ: ಶೃಂಗೇರಿ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದ ಎಂ.ಎಸ್.ಶ್ರೀಕರ ಮತ್ತು ಎ. ಜಿ. ಬೆಳ್ಳೀಗೌಡ ಇವರುಗಳು ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ ವಿಶ್ವಾಸವಿಟ್ಟು, ಪುನಃ ಸರ್ಕಾರ ರಚಿಸಲು ಪ್ರೋತ್ಸಾಹಿಸುವ ದೃಷ್ಟಿಯಿಂದ ಜನತಾ ಅಭ್ಯರ್ಥಿ ಹೆಚ್.ಜಿ.ಗೋವಿಂದ ಗೌಡರಿಗೆ ಬೆಂಬಲ ಘೋಷಿಸಿ ತಮ್ಮ ನಾಮಪತ್ರ ಹಿಂದಕ್ಕೆ ಪಡೆದಿರುವುದಾಗಿ ಗೋವಿಂದ ಗೌಡರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಪಾಕೀಟು ಸಿಕ್ಕಿದೆ

ಕೊಪ್ಪ: ಇಲ್ಲಿನ ಸರ್ಕಾರಿ ಆಸ್ಪತ್ರೆ ಎದುರು ಫೆ. 12 ರಂದು ಮಧ್ಯಾಹ್ನ 2-30 ರ ಹೊತ್ತಿಗೆ ಸಣ್ಣದೊಂದು ಪಾಕೀಟು ಇಲ್ಲಿನ ಪೆಟ್ರೋಲ್ ಬಂಕ್ ಉದ್ಯೋಗಿ ಬಿ. ಸೋಮಶೇಖರ್ ಅವರಿಗೆ ಸಿಕ್ಕಿದ್ದು, ಸ್ವಲ್ಪ ಹಣ, ಮಾತ್ರೆಗಳು ಮತ್ತು ಒಂದೆರಡು ಚಿಕ್ಕಪುಟ್ಟ ವಸ್ತುಗಳಿದ್ದ ಅದನ್ನು ಪೋಲೀಸರಿಗೊಪ್ಪಿಸಲಾಗಿದೆ. ಕಳೆದುಕೊಂಡವರು ಸರಿಯಾದ ಗುರುತು ಹೇಳಿ ಪಡೆಯಬಹುದಾಗಿದೆ.

ಕೊಪ್ಪ ಪುರಸಭೆಗೆ ಮನೆ ನಿವೇಶನಗಳಿಗಾಗಿ 10 ಎಕರೆ ಜಾಗ ಮಂಜೂರು

ಕೊಪ್ಪ: ಇಲ್ಲಿನ ಮೇಲಿನ ಪೇಟೆ ಟೋಲ್‌ಗೇಟ್ ಬಳಿ ಹೌಸಿಂಗ್ ಬೋರ್ಡ್ ಕಾಲನಿಯ ಹಿಂಭಾಗದಲ್ಲಿ ಸ॥ ನಂ. 77ರಲ್ಲಿನ 10 ಎಕರೆ ಭೂಮಿಯನ್ನು ಮನೆ ನಿವೇಶನಗಳಿಗಾಗಿ ಪುರಸಭೆಗೆ ಕಂದಾಯ ಇಲಾಖೆಯಿಂದ ಮಂಜೂರಾವಣೆ ಮಾಡಿದೆ.

ಈ ಪ್ರದೇಶದಲ್ಲಿ ರಸ್ತೆ, ಚರಂಡಿ, ನೀರಿನ ಪೈಪುಗಳು ಮತ್ತಿತರ ವ್ಯವಸ್ಥೆಗಳನ್ನೊಳಗೊಂಡ ಸುಸಜ್ಜಿತ 'ಲೇ ಔಟ್' ಸಿದ್ಧಪಡಿಸಿಕೊಂಡ ಅನಂತರವೇ ಸೈಟುಗಳ ವಿಲೇವಾರಿ ಮಾಡಲು ಪುರಸಭೆ ಉದ್ದೇಶಿಸಿದೆ. ಹೀಗಾಗಿ 1984 ರ ಅಂತ್ಯದೊಳಗೆ ವಿಲೇವಾರಿ ನಡೆಯುವ ನಿರೀಕ್ಷೆಯಿಲ್ಲ.

ಪುರಸಭೆಯ ವ್ಯಾಪ್ತಿಯ ಅಂಚಿನಿಂದ 2 ಮೈಲಿ ಸುತ್ತಳತೆಯಲ್ಲಿ ಯಾವುದೇ ಉದ್ದೇಶಕ್ಕಾಗಿ ಭೂಮಿ ನೀಡುವ ಮೊದಲು ಪುರಸಭೆಯ ಸಮ್ಮತಿ ಪಡೆದಿರಬೇಕೆಂಬ ಬಗ್ಗೆ ಇಷ್ಟರಲ್ಲೇ ಸರ್ಕಾರಿ ಆದೇಶ ಪ್ರಕಟವಾಗಲಿರುವುದಾಗಿ ತಿಳಿದುಬಂದಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಶಿವಮನೆ ನಾಗರಾಜ್; ಅಚ್ಚು: ದೀಪಿಕಾ ಅಚ್ಚು ಕೂಟ, ಕೊಪ್ಪ.